<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

**ಸಿ. ಸಿ. ನಂ. 255/2020**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಮುತ್ತುರಾಜ | ಸಿಡಬ್ಲ್ಯೂ-01 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಶಿವಶರಣಪ್ಪ ನಂದೂರ | | |
| ವಯಸ್ಸು | 26 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸ ಸ್ಥಳ | ಮಳಖೇಡ | | |

ದಿನಾಂಕ 15-02-2023

ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**</u>

ಮೃತ ಶಿವಶರಣಪ್ಪ ನಂದೂರ ಇವರು ನಮ್ಮ ತಂದೆ ಇರುತ್ತಾರೆ. 2019 ನೇ ಸಾಲಿನಲ್ಲಿ ಸಾಯಂಕಾಲ 07.00 ಗಂಟೆಗೆ ನಮ್ಮ ತಂದೆಯವರು ಗಣೇಶ ವಿರ್ಸಜನೆಗೆ ಹೋಗಿ ಹಲಗಿ ಬಾರಿಸಿ ಬರುತ್ತಿದ್ದಾಗ ಗುಲಬರ್ಗಾ ಸರ್ಕಲ ಇಲ್ಲಿ ಅಪಘಾತ ಆಗಿತ್ತು. ನಾನು ಆಗ ಮನೆಯಲ್ಲಿ ಇದ್ದಾಗ ನಮ್ಮ ಮನೆಯ ಪಕ್ಕದವರು ಸದರಿ ವಿಷಯ ಹೇಳಿರುತ್ತಾರೆ. ನನ್ನ ತಂದೆಯವರ ಮೇಲೆ ಲಾರಿ ಹರಿದಿದ್ದು ಎಂದು ತಿಳಿಸಿದಾಗ ನಾನು ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ನಮ್ಮ ತಂದೆಯವರ ತಲೆಯ ಮೇಲೆ ಲಾರಿ ಹರಿದಿತ್ತು ಅವರು ಜೀವಿತ ಇರಲಿಲ್ಲ. ಅಪಘಾತಪಡಿಸಿದ ಲಾರಿ ಅಲ್ಲಿಯೇ ಇತ್ತು. ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಲಾರಿಯ ಚಾಲಕ ಸ್ಥಳದಲ್ಲಿ ಇರಲಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಈ ಹಿಂದೆ ಎಲ್ಲಿಯೂ ನೋಡಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ, ಹೇಗೆ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಘಟನೆಯ ಕುರಿತು ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದಾದ ನಂತರ ನಾನು ಪೊಲೀಸ ಠಾಣೆಗೆ ಹೋಗಿಲ್ಲ ಅಲ್ಲಿ ಯಾವ ವ್ಯಕ್ತಿಯನ್ನು ನೋಡಿಲ್ಲ. ಲಾರಿಯ ಭಾವಚಿತ್ರಗಳನ್ನು ಗುರುತಿಸಲು ಆಗುವುದಿಲ್ಲ

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

<u>**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**</u>

ದಿನಾಂಕ 12-09-2019 ರಂದು ರಾತ್ರಿ 08.25 ಗಂಟೆಗೆ ನನಗೆ ನಾನು

ಮನೆಯಲ್ಲಿದ್ದಾಗ ನನ್ನ ಚಿಕ್ಕಪ್ಪನಾದ ನಾಗರಾಜ ನಂದೂರ ಇವರು ಅಪಘಾತದ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ನಮ್ಮ ತಂದೆಯವರು 08.20 ಗಂಟೆಗೆ ಗಣೇಶ ವಿರ್ಸಜನೆಗೆ ಹೋಗಿ ಕಾಗಿನಾ ನದಿಯ ಕಡೆಯಿಂದ ಮರಳಿ ಮನೆಗೆ ಬರುತ್ತಿದ್ದಾಗ ಚಿತ್ತಾಪುರ ಕಡೆಯಿಂದ ಒಬ್ಬ ಲಾರಿಯ ಚಾಲಕ ಲಾರಿಯನು ಅತೀ ವೇಗದಿಂದ ಮತ್ತು ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ರಸ್ತೆ ದಾಟುತ್ತಿದ್ದ ನಮ್ಮ ತಂದೆಯವರಿಗೆ ಹಾಯಿಸಿ ಅಪಘಾತಪಡಿಸಿ ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಲಾರಿ ಚಾಲಕ ಲಾರಿಯನ್ನು ಬಿಟ್ಟು ಓಡಿ ಹೋಗಿರುತ್ತಾನೆ ಬೇಗ ಬಾ ಅಂತಾ ತಿಳಿಸಿರುತ್ತಾನೆ ಎಂದರೆ ಸರಿ. ನಾನು ಅಲ್ಲಿ ಹೋಗಿ ನೋಡಿದಾಗ ಲಾರಿ ಅಶೋಕ ಲೈಲೆಂಡ ಕಂಪನಿಯದು ಇತ್ತು ಅದರ ನಂ. ಕೆಎ-32 ಡಿ-3224 ಇತ್ತು ಎಂದರೆ ಸರಿಯಲ್ಲ. ನಮ್ಮ ಚಿಕ್ಕಪ್ಪ ನಾಗರಾಜ ನಂದೂರ ಇವರು ತಾನು ಅಪಘಾತ ನೋಡಿರುವುದಾಗಿ ಚಾಲಕ ಅತೀ ವೇಗ ಹಾಗೂ ನಿಷ್ಕಾಳಜೀತನದಿಂದ ವಾಹನ ಚಲಾಯಿಸಿಕೊಂಡು ಅಪಘಾತಪಡಿಸಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿ.

ನಂತರ ದಿನಾಂಕ 13.09.2019 ರಂದು ನಾನು ಠಾಣೆಗೆ ಹೋಗಿ ಆರೋಪಿಯನ್ನು ಗುರುತು ಹಿಡಿದು ಆತನ ಹೆಸರು ತಿಳಿದುಕೊಂಡು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಆರ್. ಎಮ್. ಆರೋಪಿ ಪರ ವಕೀಲರಿಂದ**

ನನ್ನ ಚಿಕ್ಕಪ್ಪ ನನಗೆ ಆರೋಪಿ ವಾಹನವನ್ನು ಅತೀ ವೇಗ ಮತ್ತು ಜೋರಿನಿಂದ ಚಲಾಯಿಸಿಕೊಂಡು ಬಂದು ನನ್ನ ತಂದೆಯವರಿಗೆ ಅಪಘಾತಪಡಿಸಿರುವುದನ್ನು ಕಣ್ಣಾರೆ ನೋಡಿರುವುದಾಗಿ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.
ಸಹಿ/-
ಪ್ರ. ದ. ನ್ಯಾ ದಂ. ಸೇಡಂ.

*SYH